**ದಿನಾಂಕಃ 07.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನಾನು ಕಟ್ಟಡವನ್ನು ಬಾಡಿಗೆಗೆ ಪಡೆದು ಅಂಗಡಿಯನ್ನು ಇಟ್ಟುಕೊಂಡಿದ್ದೇನೆ. ಪ್ರಸ್ತುತ ಅರ್ಜಿಯನ್ನು ಅಪಘಾತದ ಪರಿಹಾರ ಕೋರಿ ಸಲ್ಲಿಸಿರುತ್ತೇನೆ. ಅಪಘಾತ ಬೆಳಿಗಿನ ಜಾವ 7-8 ಗಂಟೆಯ ನಡುವೆ ಸಂಭವಿಸಿರುತ್ತದೆ. ಅಪಘಾತದ ಬಗ್ಗೆ ದೂರನ್ನು ನಾನು ನೀಡಿಲ್ಲ, ನನ್ನ ಮಾವ ಮುನಿರಾಜುರವರು ನೀಡಿರುತ್ತಾರೆ. ಮುನಿರಾಜುರವರು ಮೃತರ ಅಕ್ಕನ ಮಗ. ಮೃತ ಮುನಿವೆಂಕಟಪ್ಪ ರವರು ನನ್ನ ಚಿಕ್ಕಪ್ಪ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ಮೃತ ಮುನಿವೆಂಕಟಪ್ಪ ನನ್ನ ಚಿಕ್ಕಪ್ಪ ಆಗಿರುವುದಿಲ್ಲ ಮತ್ತು ಇದೇ ಕಾಣದಿಂದ ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೃತ ಮುನಿವೆಂಕಟಪ್ಪ ರವರು ನನ್ನ ಚಿಕ್ಕಪ್ಪ ಆಗದೇ ಇರುವ ಕಾರಣ ನಾನು ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಲು ಹಾಗೂ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಮೃತ ಮುನಿವೆಂಕಟಪ್ಪರವರಿಗೆ ಮದುವೆ ಆಗಿಲ್ಲ ಹಾಗೂ ಮಕ್ಕಳು ಇರಲಿಲ್ಲ ಎಂದರೆ ಸರಿ. ಕೇವಲ ಪರಿಹಾರ ಪಡೆಯುವ ಉದ್ದೇಶದಿಂದ ಸಂಬಂಧ ಇಲ್ಲದೇ ಇದ್ದರೂ ಸಹ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಮೃತ ಮುನಿವೆಂಕಟಪ್ಪರವರು ಮಾಹೆಯಾನ ರೂ.50,000/- ಸಂಪಾದಿಸುತ್ತಿದ್ದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನಾನು ಆರ್ಥಿಕವಾಗಿ ಚೆನ್ನಾಗಿದ್ದು, ಮೃತ ಮುನಿವೆಂಕಟಪ್ಪರವರ ಆದಾಯದ ಮೇಲೆ ಅವಲಂಬಿತನಾಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮೃತ ಮುನಿವೆಂಕಟಪ್ಪರವರು ನನ್ನ ಸಲುವಾಗಿ ಮದುವೆಯಾಗಿರಲಿಲ್ಲ ಎಂದು ನುಡಿಯುತ್ತಾರೆ. ಮೃತ ಮುನಿವೆಂಕಟಪ್ಪರವರು ನನ್ನ ಸಲುವಾಗಿ ಮದುವೆಯಾಗಿರಲಿಲ್ಲ ಎಂದು

ತೋರಿಸಲು ಯಾವುದೇ ದಾಖಲಾತಿ ಇಲ್ಲ. ಮೃತ ಮುನಿವೆಂಕಟಪ್ಪರವರು ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ.

ಅಪಘಾತದಲ್ಲಿ ಮುನಿವೆಂಕಟಪ್ಪರವರಿಗೆ ಸಣ್ಣಪುಟ್ಟ ಗಾಯಗಳು ಆಗಿವೆ ಎಂದು ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿ ಅವರನ್ನು ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸುಶ್ರೂಷಾ ಆಸ್ಪತ್ರೆಯಲ್ಲಿ ಸರಿಯಾದ ಚಿಕಿತ್ಸೆ ಲಭ್ಯವಾಗದ ಕಾರಣ ಸಕ್ರಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನನ್ನ ಚಿಕ್ಕಪ್ಪನನ್ನು ಮೂರು ಬಾರಿ ಆಸ್ಪತ್ರೆಗೆ ದಾಖಲಿಸಿದ್ದು, ಮೊದಲ ಬಾರಿ ಅಪಘಾತದ ಗಾಯಗಳಿಗೆ ಸಂಬಂಧಿಸಿದಂತೆ, ಎರಡನೇಯ ಬಾರಿ ಹೊಟ್ಟೆ ಉಬ್ಬುಗೆ ಸಂಬಂಧಿಸಿದಂತೆ ಮತ್ತು ಮೂರನೇಯ ಬಾರಿ ಮಧುಮೇಹಕ್ಕೆ ಸಂಬಂಧಪಟ್ಟಂತೆ ದಾಖಲಿಸಿರುತ್ತೇವೆ. ಅಪಘಾತಕ್ಕೂ, 2 ಮತ್ತು 3ನೇ ಬಾರಿ ಆಸ್ಪತ್ರೆಗೆ ದಾಖಲುಪಡಿಸಿದಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಕೋಮಾ ಸ್ಥಿತಿಯಲ್ಲಿ ಇದ್ದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನನ್ನ ಚಿಕ್ಕಪ್ಪನಿಗೆ ಮಧುಮೇಹ ಇದ್ದ ಕಾರಣ 3 ದಿನಕ್ಕೊಮ್ಮೆ ಆಸ್ಪತ್ರೆಗೆ ಬಂದು ಪರೀಕ್ಷೆಗೆ ಒಳಪಡುವಂತೆ ನಿಪಿ 15 ರಲ್ಲಿ ನಮೂದು ಇದೆ ಎಂದರೆ ಸರಿ. ಅಪಘಾತವಾಗುವ 5 ವರ್ಷದ ಪೂರ್ವದಿಂದ ನನ್ನ ಚಿಕ್ಕಪ್ಪನಿಗೆ ಮಧುಮೇಹ ಕಾಯಿಲೆ ಇತ್ತು ಎಂದರೆ ಸರಿ. ನನ್ನ ಚಿಕ್ಕಪ್ಪನಿಗೆ ಮಧುಮೇಹ ಇದ್ದ ಕಾರಣ ಅಪಘಾತದಲ್ಲಿ ಸಣ್ಣಪುಟ್ಟ ಗಾಯಗಳು ಆಗಿದ್ದರೂ ಸಹ ಮಧುಮೇಹದ ಕಾರಣ ಉಲ್ಬಣಗೊಂಡಿರುತ್ತದೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನ ಸ್ಥಿತಿ ಸ್ಥಿರವಾಗಿತ್ತು ಎಂದು ಬಿಡುಗಡೆ ಸಮರಿಯಲ್ಲಿ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಕೋಮಾದಲ್ಲಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕಿತ್ಸೆ ಪಡೆದ ನಂತರ ಅಪಘಾತಕ್ಕೆ ಸಂಬಂಧಪಟ್ಟ ಗಾಯಗಳು ಗುಣ್ಣವಾಗಿದ್ದವು ಎಂದರೆ ಸರಿಯಲ್ಲ. ಸಕ್ರಾ ಆಸ್ಪತ್ರೆಯಲ್ಲಿ ಕೇವಲ ಮಧುಮೇಹ ಕಾಯಿಲೆಗೆ ಸಂಬಂಧಪಟ್ಟಂತೆ ಚಿಕಿತ್ಸೆ ಪಡೆದಿದ್ದು, ಅಪಘಾತದಲ್ಲಿ ಆದ ಗಾಯಗಳಿಗೆ ಅಲ್ಲ ಎಂದರೆ

ಸರಿಯಲ್ಲ. ನಾನು ಪ್ರಮಾಣ ಪತ್ರದಲ್ಲಿ ತಿಳಿಸಿರುವ ಬಿಲ್ಲಿನ ಮೊತ್ತ ಮತ್ತು ನಿಪಿ 15ರಲ್ಲಿನ ಬಿಲ್ಲಿನ ಮೊತ್ತಕ್ಕೆ ತಾಳೆಯಾಗುತ್ತಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿರುವಷ್ಟು ಹಣ ಚಿಕಿತ್ಸೆಗೆ ಖರ್ಚು ಆಗಿಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಗೆ ತಗುಲಿದ ಹಣವನ್ನು ಖಾತೆಯ ಮೂಲಕ ವರ್ಗಾವಣೆಯಾದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಚಿಕಿತ್ಸೆಗೆ ತಗುಲಿದ ಹಣವನ್ನು ನಾನು ಪಾವತಿಸಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ದಿನಾಂಕ 21.01.2025ರಂದು ಮೃತಪಟ್ಟಿರುತ್ತಾರೆ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನನ್ನ ಚಿಕ್ಕಪ್ಪನ ಮರಣದ ಕಾರನ ನನಗೆ ತಿಳಿದಿಲ್ಲ.

ಮೃತ ಮುನಿವೆಂಕಟಪ್ಪ ಮತ್ತು ನನ್ನ ನಡುವೆ ಯಾವುದೇ ಸಂಬಂಧ ಇಲ್ಲ ಮತ್ತು ಮೃತ ಮುನಿವೆಂಕಟಪ್ಪರವರು ನನ್ನ ಚಿಕ್ಕಪ್ಪ ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**